# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿ

## ಅಪರಾಧಿಕ ಪ್ರಕರಣ ಸಂಖ್ಯೆ: 85 / 2015

ಪಿರ್ಯಾದುದಾರರು : ಕುದೂರು ಪೋಲಿಸ್ ಠಾಣೆ.

ವಿರುದ್ಧ

ಆರೋಪಿ : ಸಿದ್ದಗೊಂಡಬೀರದಾರ ಬಿನ್ ರಾಯಗೊಂಡ
ವರ್ಷಗಳು, ಅರಕಲಗೂಡು ಡಿಪೋ,
ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.

## ಅಭಿವಾಕ

( ಶ್ರೀಮತಿ. ಲತಾ ಜೆ., ಬಿ.ಕಾಂ. ಎಲ್.ಎಲ್.ಬಿ. ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಆದ ನಾನು ನಿಮ್ಮ ಅಂದರೆ ವಿರುದ್ಧ ಈ ಕೆಳಕಂಡ ಆಪಾದನೆಯನ್ನು ಮಾಡುತ್ತಿದ್ದೇನೆ)

ದಿನಾಂಕ: 21-04-2014 ರಂದು ಮಧ್ಯಾಹ್ನ 2.15 ಗಂಟೆಯ ಸಮಯದಲ್ಲಿ ಕುದೂರು ಪೋಲಿಸ್ ಠಾಣೆ ಸರಹದ್ದು, ಕುಣಿಗಲ್-ನೆಲಮಂಗಲ ಎನ್.ಹೆಚ್-48 ರಸ್ತೆ, ಸೋಲೂರು ಡೈರಿ ಸರ್ಕಲ್‌ನಿಂದ ಸ್ವಲ್ಪ ಮುಂದೆ ಆರೋಪಿಯಾದ ನೀವು ಕೆಎ-13-ಎಫ್-1882 ಕೆ.ಎಸ್.ಆರ್.ಟಿ.ಸಿ. ಬಸ್‌ನ್ನು ಕುಣಿಗಲ್ ಕಡೆಯಿಂದ ನೆಲಮಂಗಲದ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ರಸ್ತೆಯ ಎಡಭಾಗದ ಪುಟ್‌ಪಾತ್‌ಗೆ ಇಳಿಸಿ ಅಲ್ಲಿಂದ ಸರ್ವೀಸ್ ರಸ್ತೆಗೆ ಇಳಿಸಿದ್ದರಿಂದ ಬಸ್ ಪಲ್ಟಿ ಹೊಡೆದ ಪರಿಣಾಮ ಬಸ್ ಜಖಂಗೊಂಡಿದ್ದು, ಸದರಿ ಕೃತ್ಯವು ಭಾರತೀಯ ಕಂಡ ಸಂಹಿತೆ ಕಲಂ-279 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ ಸದರಿ ಬಸ್‌ನಲ್ಲಿದ್ದ ಚಾಸಾ-4 ರಿಂದ 14 ರವರುಗಳಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಸದರಿ ಕೃತ್ಯವು ಭಾರತೀಯ ಕಂಡ ಸಂಹಿತೆ ಕಲಂ-337 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞಗೆ ಒಳಪಟ್ಟಿರುತ್ತದೆ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ ಸದರಿ ಬಸ್‌ನಲ್ಲಿದ್ದ ಚಾಸಾ-15ಃಧನಲಕ್ಷ್ಮೀ ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಸದರಿ ಕೃತ್ಯವು ಭಾರತೀಯ ಕಂಡ ಸಂಹಿತೆ ಕಲಂ-338 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞಗೆ ಒಳಪಟ್ಟಿರುತ್ತದೆ.

ಪ್ರಶ್ನೆ-1 : ಆಪಾದನೆ ಓದಿ ಹೇಳಿದ್ದು ಅರ್ಥವಾಯಿತೇ ?

ಆರೋಪಿಯ ಉತ್ತರ :

ಪ್ರಶ್ನೆ-2 : ನೀವು ಈ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆ ಆಗಬೇಕೇ ?

ಆರೋಪಿಯ ಉತ್ತರ :

ಈ ಮೇಲ್ಕಂಡ ಆಪಾದನೆಯನ್ನು ನೀವು ಈ ನ್ಯಾಯಾಲಯದ ಸಂಜ್ಞದೊಳಗೆ ಎಸಗಿರುವುದಾಗಿ ಈ ಮೂಲಕ ನ್ಯಾಯಾಲಯದ ವಿಚಾರಣೆಗೆ ಒಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.

( ಈ ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ ಸರಿ ಇದೆ ಎಂದು ನನ್ನ ಸಮಕ್ಷಮ ದಿನಾಂಕಃ 20-03-2018 ರಂದು ಸಹಿಯನ್ನು ಮಾಡಿರುತ್ತೇನೆ )

( ಶ್ರೀಮತಿ. ಲತಾ ಜೆ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ನ್ಯಾಯಾಲಯ,
ಮಾಗಡಿ.

ಆರೋಪಿಯ ರವರ ಸಹಿ :